ಮೂಲಕ ಪಡಿಪಾಟಲುಗಳಿಗೆ ಒಳಗಾದರೆ, 'ಕೂರ್ಮಾವತಾರ' ಚಿತ್ರದ ಗುಮಾಸ್ತ ಗಾಂಧಿ ಪಾತ್ರದಲ್ಲಿ ನಟಿಸಲು ಹೋಗಿ ಬದಲಾವಣೆಗೆ ಗುರಿಯಾಗುತ್ತಾನೆ. ಗಾಂಧಿಯ ಪಾತ್ರದಲ್ಲಿ ನಟಿಸಲು ಒತ್ತಾಯದಿಂದ ಒಪ್ಪಿಕೊಂಡ ತನ್ನದೇ ಲೋಕದಲ್ಲಿ ಮುಳುಗಿದ್ದ ವ್ಯಕ್ತಿ, ತಾನು ನಿರ್ವಹಿಸುವ ಪಾತ್ರದ ಮೂಲಕ ಗಾಂಧಿಮಾರ್ಗವನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಲೇ ತನ್ನ ಬದುಕನ್ನೂ ಶೋಧನೆಗೆ ಒಡ್ಡುವುದು ಚಿತ್ರದ ಕಥೆ.

'ಗಾಂಧಿ ತಮ್ಮ ಸಿದ್ಧಾಂತಗಳನ್ನು ಹೆಂಡತಿ–ಮಕ್ಕಳ ಮೇಲೆ ಬಲವಂತವಾಗಿ ಹೇರಿದ್ದು ತಪ್ಪಲ್ಲವಾ ಸಾರ್?' ಎಂದು ನಿರ್ದೇಶಕರನ್ನು ಪ್ರಶ್ನಿಸುವ ಗಾಂಧಿ ಪಾತ್ರಧಾರಿಗೆ, ತಾನು ಕೂಡ ತನ್ನ ಪತ್ನಿಯ ಭಾವನೆಗಳಿಗೆ ಸ್ಪಂದಿಸದೆ ಹೋದುದರ ಅರಿವೇ ಇಲ್ಲ. ಅಪ್ಪನಿಗೆ ಮಗ ಕಹಿಸತ್ಯದ ದರ್ಶನ ಮಾಡಿಸುತ್ತಾನೆ.

ಧಾರಾವಾಹಿ ಯಶಸ್ವಿಯಾಗದಿದ್ದರೂ ಗಾಂಧಿಯ ಪಾತ್ರಧಾರಿ ಜನಪ್ರಿಯತೆ ಗಳಿಸುತ್ತಾನೆ. ಕಚೇರಿಯಲ್ಲಿ ವಿಶೇಷ ಗೌರವ ದೊರೆಯುತ್ತದೆ. ಈ ಪಾತ್ರಧಾರಿಯನ್ನು ಬಳಸಿಕೊಂಡು ವ್ಯಕ್ತಿಯೊಬ್ಬ ಸರ್ಕಾರಿ ಕಚೇರಿಯಲ್ಲಿ ಕೆಲಸ ಮಾಡಿಸಿಕೊಳ್ಳುತ್ತಾನೆ. ಗಾಂಧಿ ಜಾಹೀರಾತುಗಳಿಗೆ ರೂಪದರ್ಶಿಯಾಗುತ್ತಾನೆ. ವೃದ್ಧ ಸ್ವಾತಂತ್ರ್ಯ ಹೋರಾಟಗಾರ ತನ್ನ ಆಶ್ರಮ ಉಳಿಸಿಕೊಳ್ಳಲಿಕ್ಕಾಗಿ ಸರ್ಕಾರಿ ಕಚೇರಿಯಲ್ಲಿ ತಬರನಂತೆ ಎಡತಾಕುವಾಗ, ಆತನಿಗೆ ಗಾಂಧಿ ಪಾತ್ರಧಾರಿಯೂ ಜೊತೆಯಾಗುತ್ತಾನೆ. ಧಾರಾವಾಹಿಯ ನಿರ್ದೇಶಕನ ಪಾಲಿಗೆ ಗಾಂಧಿ ಒಂದು ಸರಕು ಮಾತ್ರ. ಈ ಸನ್ನಿವೇಶಗಳ ಮೂಲಕ ಸಮಕಾಲೀನ ರಾಜಕಾರಣದಲ್ಲಿ ಗಾಂಧಿ ಚಲಾವಣೆಯಾಗುತ್ತಿರುವ ರೀತಿಯನ್ನು ಸಿನಿಮಾ ಮಾರ್ಮಿಕವಾಗಿ ಚಿತ್ರಿಸುತ್ತದೆ.

ಗಾಂಧಿಯ ಮೌಲ್ಯಗಳು ಮತ್ತೆ ಮತ್ತೆ ಅಪಮೌಲ್ಯಕ್ಕೆ ಒಳಗಾಗುತ್ತಿರುವುದನ್ನು ಗಾಂಧಿ ಹತ್ಯೆಯ ಸನ್ನಿವೇಶದ ಮೂಲಕ ಕಾಸರವಳ್ಳಿ ಚಿತ್ರಿಸುತ್ತಾರೆ. ಗಾಂಧಿಯ ಸಾವಿನ ಸನ್ನಿವೇಶವನ್ನು ಮತ್ತೆ ಮತ್ತೆ ಚಿತ್ರೀಕರಿಸಿದರೂ ನಿರ್ದೇಶಕ ಅಸಮಾಧಾನದಿಂದಲೇ ದೃಶ್ಯವನ್ನು ಅಂತಿಮಗೊಳಿಸುತ್ತಾನೆ. ಗಾಂಧಿಯನ್ನು ಮತ್ತೆ ಮತ್ತೆ ಕೊಲ್ಲುವ ವಿಡಂಬನೆ ಚಿತ್ರದ ಧ್ವನಿಶಕ್ತಿಯನ್ನು ಹೆಚ್ಚಿಸಿದೆ.

ಗಾಂಧಿ ವೇಷಧಾರಿಯ ಯುವ ಗೆಳೆಯ ಗೋಡ್ಸೆಯ ಪಾತ್ರದಲ್ಲಿ ನಟಿಸುವುದು ಕೂಡ ವಿವಾದಕ್ಕೆ ಕಾರಣವಾಗುತ್ತದೆ. ಗೋಡ್ಸೆ ಪಾತ್ರವನ್ನು ಮುಸ್ಲಿಂ ಹುಡುಗ ಮಾಡುವುದನ್ನು ಕೆಲವರು ವಿರೋಧಿಸುತ್ತಾರೆ. ದೇಶಭಕ್ತಿ, ಗಾಂಧಿಯ ರೂಪಕಗಳು ಮತೀಯ ಬಣ್ಣ ಪಡೆದುಕೊಂಡಾಗ, 'ಸೋತಿದ್ದು ನೀನಲ್ಲಪ್ಪ, ನಾನು' ಎಂದು ಗಾಂಧಿ ವೇಷಧಾರಿ ಹತಾಶೆಯಿಂದ ಉದ್ಗರಿಸುತ್ತಾನೆ. ಕೊನೆಗೆ, ಹಣದ ಕಾರಣದಿಂದಾಗಿ ಮಗ ಕೂಡ ಅಪ್ಪನ ವಿರುದ್ಧ ನಿಲ್ಲುತ್ತಾನೆ. ಚಿಪ್ಪಿನಿಂದ ಹೊರಬರಲು ಆಮೆ ಯತ್ನಿಸಿದರೂ, ವ್ಯವಸ್ಥೆಯ ಕಾರಣದಿಂದಾಗಿ ಚಿಪ್ಪಿನಲ್ಲಿಯೇ ಉಳಿಯಬೇಕಾದ ಅನಿವಾರ್ಯತೆ ಕಥಾನಾಯಕನದೂ ಆಗಿದೆ.

ಪ್ರೊ. ಶಿಕಾರಿಪುರ ಕೃಷ್ಣಮೂರ್ತಿ 'ಕೂರ್ಮಾವತಾರ' ಚಿತ್ರದಲ್ಲಿನ ಗಾಂಧಿ ವೇಷಧಾರಿ. ಪೀಚು ದೇಹದ, ಒಡಕಲು ಧ್ವನಿಯ ಅವರು ಗಾಂಧಿಯಾಗಲು ನಡೆಸಿರುವ ಪ್ರಯತ್ನ ನಮ್ಮೊಳಗಿನ ಗಾಂಧಿಯನ್ನು ಮಾತಿಗೆಳೆಯುವಷ್ಟು ಪ್ರಭಾವಶಾಲಿಯಾಗಿದೆ.

'ಮಾಡಿ ಮಡಿದವರು', 'ನಾನು ಗಾಂಧಿ' ಹಾಗೂ 'ಕೂರ್ಮಾವತಾರ' ಚಿತ್ರಗಳನ್ನು ಹೊರತುಪಡಿಸಿದರೆ ಗಾಂಧಿಯನ್ನು ಪೂರ್ಣ ಪ್ರಮಾಣದಲ್ಲಿ ಎದುರುಗೊಂಡಿರುವ ಮತ್ತೊಂದು ಸಿನಿಮಾ ಕನ್ನಡದಲ್ಲಿಲ್ಲ. ಕನ್ನಡ ಮಾತ್ರವಲ್ಲ, ಉಳಿದ ಭಾರತೀಯ ಭಾಷೆಗಳೂ ಗಾಂಧಿಯನ್ನು ಒಳಗೊಳ್ಳುವಲ್ಲಿ ಗಮನಾರ್ಹ ಪ್ರಯತ್ನಗಳನ್ನೇನೂ ಮಾಡಿಲ್ಲ. ಗಾಂಧಿ ಎನ್ನುವ ವ್ಯಕ್ತಿತ್ವದ